ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Wednesday, 26th July 1972/Shravana 4, 1894 S E

The House met in the Assembly Chamber, Vidhana Soudha, at One of the clock.

MADAM SPEAKER SMT. K. S. NAGARATHNAMMA in the Chair.

STARRED QUESTIONS

(to which Oral Answers were given)

SCARCITY OF DRINKING WATER SUPPLY IN HADAGALI AND MALLAPUR TALUKS

371. SRI C. ANDANEPPA (Hadagali).—

Will the Minister for Community Development and Social Welfare be pleased to state:—

The steps taken by Government to make immediate arrangements to dig drinking water wells in Hadagali and Mallapur taluks where drinking water problem is acute and also to deepen the existing drinking water wells there ?

SRI M. MALLIKARJUNASWAMY (Minister for Community Development and Social Welfare).—

Hadagali Taluk :—Scarcity of drinking water is felt in 18 villages.

In one village, National Rural Water Supply Scheme has been sanctioned It is programmed to provide bore wells to 10 villages during this year and in respect of the remaining villages, deepening of the existing drinking water wells has been taken up.

Mallapur taluk :—Scarcity is felt in 7 villages.

(SRI M. MALLIKARJUNASWAMY)

A bore well has been sunk with success in one village. The existing drinking water wells have been deepened in 2 villages with success. Deepening the existing drinking water wells is taken up in 4 villages and it is programmed to provide a bore well in the other one village during this year.

ಶ್ರೀ ಸಿ. ಆಂದಾನಪ್ಪ.—ಹಡಗಲಿ ತಾಲ್ಲೂಕು ಹಾಗೂ ಮಲ್ಲಾಪುರ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲು ಕೊಳವೆ ಬಾವಿಗಳನ್ನು ಒದಗಿಸಲು ಈ ವರ್ಷದಲ್ಲಿ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ ಎಂದು ಹೇಳಿದ್ದೀರಿ, ಹಾಗಾದರೆ ಅಲ್ಲಿ ಈಗಾಗಲೇ ಕೆಲಸ ಪ್ರಾರಂಭವಾಗಿದೆಯೇ ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಪ್ರಾರಂಭವಾಗಿದೆ.

ಶ್ರೀ ಸಿ. ಆಂದಾನಪ್ಪ.—ಅಲ್ಲಿ ಕೆಲಸ ಪ್ರಾರಂಭವಾಗಿಲ್ಲ. ಬಾವಿಯನ್ನು ತೋಡುವ ಮಿಷನ್ ಕೂಡ ಅಲ್ಲಿ ಇಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ —ಈಗ ಎರಡು ಹಳ್ಳಿಗಳಲ್ಲಿ ಈ ಕೆಲಸವನ್ನು ತೆಗೆದುಕೊಳ್ಳಲಾಗಿದೆ. ಒಂದು ಮಲ್ಲಾಪುರ. ಇನ್ನೊಂದು ಸೇರೆಹಳ್ಳಿ.

ಶ್ರೀ ಬಿ. ಸತ್ಯನಾರಾಯಣಸಿಂಗ್.—ತಾವು "ಈ" ಪ್ರಶ್ನೆಗೆ ಕೊಟ್ಟರತಕ್ಕ ಉತ್ತರದಲ್ಲಿ ಮಲ್ಲಾಪುರ ತಾಲ್ಲೂಕಿನಲ್ಲಿ ೭ ಗ್ರಾಮಗಳಲ್ಲಿ ಮಾತ್ರ ನೀರಿನ ಅಭಾವ ಇದೆಯೆಂದು ತಿಳಿಸಿದ್ದೀರಿ, ಆದ್ದರಿಂದ ಆ ಹಳ್ಳಿಗಳಿಗೆ ಬೋರ್‌ವೆಲ್‌ಗಳನ್ನು ತೋಡಲು ತಾವು ಆದೇಶವನ್ನು ಕೊಟ್ಟಿದ್ದೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅಲ್ಲಿಗೆ ನಾವು ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಹಡಗಲಿ ತಾಲ್ಲೂಕಿನಲ್ಲಿ ೧೮ ಗ್ರಾಮಗಳಲ್ಲಿ, ಮತ್ತು ಮಲ್ಲಾಪುರ ತಾಲ್ಲೂಕಿನಲ್ಲಿ ೭ ಗ್ರಾಮಗಳಲ್ಲಿ ನೀರಿನ ಅಭಾವ ಖಾಯಂ ಆಗಿ ಇದೆ, ಅದನ್ನು ಪರಿಹಾರ ಮಾಡಲು ನಾವು ಕೊಳವೆ ಬಾವಿಗಳನ್ನು ತೋಡುತ್ತೇವೆ ಎಂದು ಹೇಳಿದ್ದೀರಿ, ಈಗ ತಾವು ಅಲ್ಲಿ ಎಷ್ಟು ಕೊಳವೆ ಬಾವಿಗಳನ್ನು ತೋಡಿಸಿದ್ದೀರಿ, ಆ ಗ್ರಾಮಗಳಿಗೆ ಎಷ್ಟು ನೀರು ಬೇಕು. ಆ ಕೊಳವೆ ಬಾವಿಗಳಿಂದ ಎಷ್ಟು ನೀರು ಸಪ್ಲೈ ಆಗುತ್ತದೆ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗ ಅಲ್ಲಿ ಒಟ್ಟು ೧೧೨ ಹಳ್ಳಿಗಳು ಇವೆ. ಅವುಗಳ ಪೈಕಿ ೧೮ ಹಳ್ಳಿಗಳಿಗೆ ಮಾತ್ರ ನೀರು ಸಪ್ಲೈ ಆಗುತ್ತಾ ಇಲ್ಲ ಎಂದು ವರದಿ ಬಂದಿದೆ. ಹಡಗಲಿ ತಾಲ್ಲೂಕಿನಲ್ಲಿ ನೀರಿನ ಅಭಾವ ಬಹಳ ಇದೆ. ಆದ್ದರಿಂದ ಅಲ್ಲಿರತಕ್ಕ ಬಾವಿಗಳನ್ನು ಆಳ ಮಾಡತಕ್ಕದ್ದು ಮತ್ತು ಬೋರ್‌ವೆಲ್‌ಗಳನ್ನು ತೆಗೆಯುವುದು ಈ ಕಾರ್ಯಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆ.

ಶ್ರೀ ಬಿ. ಸತ್ಯನಾರಾಯಣಸಿಂಗ್ — ಮಲ್ಲಾಪುರ ತಾಲ್ಲೂಕಿನಲ್ಲಿ ಮರನಗದ್ದೆ ಎಂಬ ಗ್ರಾಮದಲ್ಲಿ ನೀರಿನ ಅಭಾವ ಜಾಸ್ತಿಯಾಗಿದೆ ಪಿ.ಡಬ್ಲ್ಯೂ.ಡಿ. ಲಾರಿಯಿಂದ ನೀರನ್ನು ತರುತ್ತಿದ್ದಾರೆ. ಆದರೂ ಅದು ಸಾಕಾಗುವುದಿಲ್ಲ. ಆದ್ದರಿಂದ ಅಲ್ಲಿಗೆ ಹೆಚ್ಚಿನ ನೀರನ್ನು ಒದಗಿಸಲು ಬಾವಿಯನ್ನು ತೋಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಆ ಪ್ರಯತ್ನವನ್ನು ಮಾಡಲಾಗುತ್ತದೆ.

ಶ್ರೀ ಸಿ. ಆಂದಾನಪ್ಪ.—ಹಡಗಲಿ ತಾಲ್ಲೂಕಿನಲ್ಲಿ ಬಾವಿಗಳನ್ನು ತೋಡತಕ್ಕ ಬೋರಿಂಗ್‌ಮಿಷನ್ ಕೆಲಸ ಮಾಡುತ್ತಿದೆ ಎಂದು ತಾವು ಹೇಳಿದಿರಿ. ಈಗ ಅಲ್ಲಿ ಬೋರಿಂಗ್ ಮಿಷನ್ ಇಲ್ಲ. ಅಲ್ಲಿ ೩೦-೪೦ ಅಡಿ ಬಾವಿಯನ್ನು ತೆಗೆದು ಆ ಮೆಷನ್ ವಾಪಸ್ಸು ಹೊರಟುಹೋಗಿದೆ. ಆದ್ದರಿಂದ ಅಲ್ಲಿ ಬಾವಿಗಳನ್ನು ತೆಗೆಯುವುದಕ್ಕೆ ಬೋರಿಂಗ್ ಮೆಷನ್‌ಅನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

Astricks indicate that remarks or speaches have not been revised by the member concerned.